ದಿನಾಂಕ 24.07.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ಮತ್ತು 2ನೇ ಪ್ರತಿವಾದಿಗಳ ಪರ ಶ್ರೀ ಹೆಚ್.ಜೆ., ವಕೀಲರಿಂದಃ-

ನಾನು ಡಿಪ್ಲೋಮಾ ಮೆಕ್ಯಾನಿಕಲ್ ಇಂಜಿನೀಯರಿಂಗ್ ಕೋರ್ಸ್ ಮಾಡಿದ್ದೇನೆ. ನಮ್ಮ ಮನೆಯಲ್ಲಿ ನಾನು, ನನ್ನ ತಂದೆ-ತಾಯಿ ಹಾಗೂ ನನ್ನ ಹೆಂಡತಿ ಇರುತ್ತೇವೆ. 1 ಹಾಗೂ 2ನೇ ಪ್ರತಿವಾದಿಗಳ ನಡುವೆ ಏನು ಸಂಬಂಧ ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಸುಮಾರು 25 ವರ್ಷಗಳಿಂದ ಪ್ರತಿವಾದಿಗಳು ಗೊತ್ತು. 1ನೇ ಪ್ರತಿವಾದಿಯ ತಂದೆ ಕೆ.ಸಿ.ಶಿವರುದ್ರಯ್ಯನಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಐದು ಜನ ಹೆಣ್ಣು ಮಕ್ಕಳಿದ್ದು, ಅವರ ಪೈಕಿ ಒಬ್ಬ ಮಗ ಹಾಗೂ ಒಬ್ಬ ಮಗಳು ಪೌತಿಯಾಗಿರುತ್ತಾರೆ. ದಾವಾ ಸ್ವತ್ತು ಕೆ.ಸಿ.ಶಿವರುದ್ರಯ್ಯನ ಪಿತ್ರಾರ್ಜಿತ ಸ್ವತ್ತು ಎನ್ನುವುದು ನನಗೆ ಗೊತ್ತಿಲ್ಲ. ಈಗ ನಮ್ಮ ತಂದೆಗೆ ಸುಮಾರು 87 ರಿಂದ 88 ವರ್ಷ ವಯಸ್ಸು. ಅವರಿಗೆ ನಡೆದಾಡಲು ಆಗುತ್ತದೆ, ಕಣ್ಣು ಸರಿಯಾಗಿ ಕಾಣುತ್ತದೆ ಹಾಗೂ ಕಿವಿ ಸರಿಯಾಗಿ ಕೇಳುತ್ತದೆ? ಎಂದರೆ ಸಾಕ್ಷಿಯು ಒಂದು ಕಾಣುವುದಿಲ್ಲ ಹಾಗೂ ಕಿವಿ ಸರಿಯಾಗಿ ಕೇಳುವುದಿಲ್ಲ ಎಂದು ನುಡಿಯುತ್ತಾರೆ. ಕಳೆದ 3 ವರ್ಷಗಳಿಂದ ನನ್ನ ತಂದೆಗೆ ಮೇಲೆ ಹೇಳಿದಂಹತ ಆರೋಗ್ಯ ಸಮಸ್ಯೆಗಳು ಇರುತ್ತವೆ. ಈ ದಾವೆಯಲ್ಲಿ ನಾನು ನನ್ನ ತಂದೆಯ ಮಗನ ನಾತೆಯಿಂದ ಸಾಕ್ಷಿ ನುಡಿಯುತ್ತಿದ್ದೇನೆ. ನನ್ನ ತಂದೆ 4ನೇ ತರಗತಿಯವರೆಗೆ ಓದಿದ್ದಾರೆ.

2. ನಮ್ಮ ತಂದೆ ನನ್ನ ಹೆಸರಿಗೆ ವಿಶೇಷ ಅಧಿಕಾರ ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದು ಹೇಳುವ ಛಾಪಾ ಕಾಗದವನ್ನು 2021ರಲ್ಲಿ ವಿಜಯನಗರದಲ್ಲಿ ಖರೀದಿಸಿರುತ್ತಾರೆ. ಸದರಿ ವಿಶೇಷ ಅಧಿಕಾರ ಪತ್ರವನ್ನು ಏಪ್ರಿಲ್ ಅಥವಾ ಆಗಸ್ಟ್-2021ರಲ್ಲಿ ಮಾಡಿರಬಹುದು. ಸದರಿ ವಿಶೇಷ

ಅಧಿಕಾರ ಪತ್ರವನ್ನು ಮಾಡಿಕೊಡುವಾಗಲೇ ಅಸಲುದಾವಾ ಸಂಖ್ಯೆ 13/2018 ರ ದಾವೆಗೂ ಸಂಬಂಧಿಸಿದಂತೆ ನಮ್ಮ ತಂದೆ ನನ್ನ ಹೆಸರಿಗೆ ಅಧಿಕಾರ ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ನಮ್ಮ ತಂದೆ ರಾಮನಗರದಲ್ಲಿ ಒಟ್ಟು 4 ದಾವೆಗಳನ್ನು ದಾಖಲಿಸಿರುತ್ತಾರೆ. ಸದರಿ 4 ದಾವೆಗಳನ್ನು ನಿರ್ದಿಷ್ಟ ಕರಾರು ಅನುಷ್ಠಾನ ಕೋರಿ ದಾಖಲಿಸಿದ್ದಾರೆ? ಎಂದರೆ ಸಾಕ್ಷಿಯು ಸುಳ್ಳು, 4 ದಾವೆಗಳ ಪೈಕಿ 3 ದಾವೆಗಳನ್ನು ನಿರ್ದಿಷ್ಟ ಕರಾರು ಅನುಷ್ಠಾನ ಕೋರಿ ದಾಖಲಿಸಿದ್ದು, ಒಂದು ದಾವೆಯಲ್ಲಿ ಘೋಷಣಾತ್ಮಕ ಪರಿಹಾರವನ್ನು ಕೋರಿ ದಾಖಲಿಸಲಾಗಿತ್ತು ಎಂದು ನುಡಿಯುತ್ತಾರೆ. ಈ ದಿನಕ್ಕೆ ಮಾಗಡಿಯಲ್ಲಿ ಹಾಗೂ ಬೆಂಗಳೂರಿನಲ್ಲಿ ನಮ್ಮ ತಂದೆ ದಾಖಲಿಸಿರುವ ಯಾವುದೇ ದಾವೆ ಚಾಲ್ತಿಯಲ್ಲಿಲ್ಲ.

3. ನನಗೆ ಈ ದಾವೆಯ ಕುರಿತು 2018 ರಿಂದ ಗೊತ್ತಿರುತ್ತದೆ. ನಮ್ಮ ತಂದೆ ಹಾಗೂ ಪ್ರತಿವಾದಿಗಳ ನಡುವೆ ವ್ಯವಹಾರ ನಡೆದಿರುವ ವಿಚಾರ ನನಗೆ 2015 ರಿಂದ ಗೊತ್ತಿರುತ್ತದೆ. ನನ್ನ ಹೆಸರಿಗೆ ನೀಡಲಾಗಿರುವ ವಿಶೇಷ ಅಧಿಕಾರ ಪತ್ರದ ಬಗ್ಗೆ ನನಗೆ ಗೊತ್ತಿರುತ್ತದೆ. ನಿಪಿ-1 ರ 2 ನೇ ಪುಟದಲ್ಲಿ ನೋಟರಿಯವರ ಸಹಿ ಹಾಗೂ ಸೀಲು ಇರುತ್ತದೆ ಎನ್ನುವುದು ನಿಜ. ನಾನು ನಿಪಿ-1 ಅಟೆಸ್ಟೆಡ್ ಪ್ರತಿಯನ್ನು ಹಾಜರುಪಡಿಸಿದ್ದೇನೆ ಎನ್ನುವುದು ನಿಜ. ನಾನು ನಿಪಿ-1 ರ ಮೂಲ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಿಪಿ-1 ಮೂಲ ಪ್ರತಿ ಎಂದೇ ನಮಗೆ ನೀಡಲಾಗಿರುವುದು ಎಂದು ನುಡಿಯುತ್ತಾರೆ. ನಿಪಿ-1 ರ 1 ಹಾಗೂ 2 ನೇ ಪುಟದಲ್ಲಿ ವೀರಣ್ಣ ಎಂಬ ಸಹಿ ಇದ್ದು, ಅಸಲುದಾವಾ ಸಂಖ್ಯೆ 13/2018 ರಲ್ಲಿ ಹಾಜರುಪಡಿಸಲಾದ ನಿಪಿ-1 ದಾಖಲೆಯಲ್ಲಿನ ಎರಡೂ ಪುಟಗಳಲ್ಲಿ ವಿ.ವೀರಣ್ಣ ಎಂಬ ಸಹಿಗಳಿವೆ ಎನ್ನುವುದು ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಸಲುದಾವಾ ಸಂಖ್ಯೆ 13/2018 ರ ನಿಪಿ-1 ರ ಎರಡೂ ಪುಟಗಳಲ್ಲಿಯೂ ನಮ್ಮ ತಂದೆ ಸಹಿ ಮಾಡಬೇಕೆಂಬ ಜಾಗವನ್ನು ತೋರಿಸಲು ಗುರುತಿಸಲಾದ ಚಿಹ್ನೆ ಇರುತ್ತದೆ

ಎಂದು ನುಡಿಯುತ್ತಾರೆ. ಸಾಕ್ಷಿಗೆ ತೋರಿಸಲಾದ ಅಸಲುದಾವಾ ಸಂಖ್ಯೆ 13/2018 ರಲ್ಲಿನ ನಿಪಿ-1 ರ ದೃಢೀಕೃತ ನಕಲನ್ನು ಗುರುತಿಸುವಿಕೆಯ ಸಲುವಾಗಿ **ನಿಎಸ್-**1 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿನ ಹಾಗೂ ನಿಎಸ್-1 ರಲ್ಲಿನ ಸಹಿಗಳು ಬೇರೆ ಬೇರೆ ಎನ್ನುವುದು ಸರಿಯಲ್ಲ.

4. ನಿಪಿ-1 ರ ಕರಡು ಪ್ರತಿಯನ್ನು ಬೆಂಗಳೂರಿನ ಆರ್.ಪಿ.ಸಿ., ಲೇಔಟ್‌ನ ಪೈಪ್‌ಲೈನ್ ರಸ್ತೆಯಲ್ಲಿ ಶಶಿಕಲಾ ಎಂಬ ವಕೀಲರ ಕಛೇರಿಯಲ್ಲಿ ತಯಾರಿಸಲಾಗಿರುತ್ತದೆ. ಸದರಿ ಕರಡು ಪ್ರತಿಯನ್ನು ಏಪ್ರಿಲ್ 2021 ರಂದು ತಯಾರಿಸಲಾಗಿದ್ದು, ಅದರ ತಾರೀಖನ್ನು ಮರೆತಿದ್ದೇನೆ. ಏಪ್ರಿಲ್ 2021 ರಲ್ಲಿ ಸದರಿ ವಕೀಲರು ಸದರಿ ದಾಖಲೆಗೆ ಸಹಿ ಮಾಡಿಲ್ಲ ಎನ್ನುವುದು ಸರಿಯಲ್ಲ. ನಿಪಿ-1 ರ 2 ನೇ ಪುಟದಲ್ಲಿ ಕಾಣಿಸಲಾದ ನಮೂದಿನ ಪ್ರಕಾರ ಸದರಿ ದಾಖಲೆಯಲ್ಲಿ ದಿನಾಂಕ 07.08.2021 ರ ಸೀಲನ್ನು ಹಾಕಲಾಗಿದೆ ಎನ್ನುವುದು ನಿಜ. ಸದರಿ ದಾಖಲೆಯನ್ನು ತಯಾರಿಸಲು ಅದರ ಛಾಪಾ ಕಾಗದವನ್ನು ಎಷ್ಟು ದಿನಗಳ ಮೊದಲು ಖರೀದಿಸಲಾಗಿತ್ತು ಎನ್ನುವುದನ್ನು ನಾನು ಮರೆತಿದ್ದೇನೆ. ನಿಪಿ-1 ರ 1 ನೇ ಪುಟದಲ್ಲಿನ ಮಾಹಿತಿಯ ಪ್ರಕಾರ ಸದರಿ ಛಾಪಾ ಕಾಗದವನ್ನು ದಿನಾಂಕ 27.03.2021 ರಂದು ಖರೀದಿಸಲಾಗಿತ್ತು ಎನ್ನುವುದು ನಿಜ. ಸದರಿ ಛಾಪಾ ಕಾಗದವನ್ನು ಖರೀದಿಸಿದ ನಂತರದಲ್ಲಿ ನಮ್ಮ ತಂದೆ ರಾಮನಗರಕ್ಕೆ ಎಂದಿಗೂ ಬಂದಿಲ್ಲ. ನಿಪಿ-1 ದಾಖಲೆಯಾದ ನಂತರದಲ್ಲಿ ನಮ್ಮ ತಂದೆ ರಾಮನಗರಕ್ಕೆ ಬಂದಿದ್ದರೇ? ಎನ್ನುವುದನ್ನು ನಾನು ಮರೆತಿದ್ದೇನೆ.

5. ದಿನಾಂಕ 07.08.2021 ರ ಸಮಯಕ್ಕೆ ನಾನು ಬಿ.ಎಂ.ಟಿ.ಸಿ.,ಯ ನಾಗರಬಾವಿ ಘಟಕ 17 ರಲ್ಲಿ ಕೆಲಸ ಮಾಡುತ್ತಿದ್ದೆ. ಆ ಸಮಯಕ್ಕೆ ನನ್ನ ಕರ್ತವ್ಯದ ಸಮಯ ಎಷ್ಟಿತ್ತು ಎನ್ನುವುದನ್ನು ನಾನು ಮರೆತಿದ್ದೇನೆ. ನಾನು ಸಾಮಾನ್ಯವಾಗಿ ಬೆಳಗ್ಗೆ 6.30 ಕ್ಕೆ ಕೆಲಸಕ್ಕೆ ಹೋಗಿ ಸಂಜೆ 5.30 ರಿಂದ 6.00

ಗಂಟೆಯ ವೇಳೆಗೆ ಮನೆಗೆ ವಾಪಸ್ಸಾಗುತ್ತೇನೆ.

6. ನನಗೆ ರಾಮನಗರದ ಶ್ರೀ ಸಿದ್ದೇಗೌಡ ವಕೀಲರು ಸುಮಾರು ಐದಾರು ವರ್ಷಗಳಿಂದ ಪರಿಚಯವಿರುತ್ತಾರೆ. ನಾನು ನಿಪಿ-1 ದಾಖಲೆಗೆ ದಿನಾಂಕ 07.08.2021 ರಂದು ಕೆ.ಸಿ.ಶಶಿಕಲಾ ವಕೀಲರಿಂದ ಸಹಿ ಮಾಡಿಸಿದ ಎಷ್ಟು ದಿನಗಳ ನಂತರದಲ್ಲಿ ಶ್ರೀ ಸಿದ್ದೇಗೌಡ ವಕೀಲರಿಂದ ಸದರಿ ದಾಖಲೆಗೆ ಸಹಿ ಮಾಡಿಸಿದ್ದೇನೆ ಎನ್ನುವುದನ್ನು ನಾನು ಮರೆತಿದ್ದೇನೆ. ನಿಪಿ-1 ದಾಖಲೆಗೆ ನಾನು ಶ್ರೀ ಸಿದ್ದೇಗೌಡ ವಕೀಲರ ಸಹಿಯನ್ನು ಯಾವ ತಾರೀಖಿನಂದು ಪಡೆದುಕೊಂಡಿದ್ದೇನೆ ಎನ್ನುವುದನ್ನು ಮರೆತಿದ್ದೇನೆ. ಶ್ರೀ ಸಿದ್ದೇಗೌಡ ವಕೀಲರು ನನ್ನ ತಂದೆಗೆ ಪರಿಚಯಸ್ಥರಲ್ಲ ಎನ್ನುವುದು ನಿಜ. ನಿಪಿ-1 ದಾಖಲೆಯನ್ನು ಶ್ರೀ ಸಿದ್ದೇಗೌಡ ವಕೀಲರ ಬಳಿ ತೆಗೆದುಕೊಂಡು ಹೋದಾಗ ನಾನು ಹಾಗೂ ನನ್ನ ತಂದೆ ಹೋಗಿದ್ದೆವು. ನಿಪಿ-1 ದಾಖಲೆಯನ್ನು ಮಾಡುವಾಗ ನನ್ನ ತಂದೆಗೆ ಗೊತ್ತಿಲ್ಲದೇ ಬೆಂಗಳೂರಿನ ಕೆ.ಸಿ.ಶಶಿಕಲಾ ಎಂಬ ನೋಟರಿಯವರಿಂದ ಸದರಿ ದಾಖಲೆಗೆ ಸಹಿಯನ್ನು ಪಡೆದುಕೊಂಡು, ಆ ನಂತರ ನನ್ನ ಪರಿಚಯಸ್ಥರಾದ ಶ್ರೀ ಎಸ್. ಸಿದ್ದೇಗೌಡ ರವರ ಸಹಿಯನ್ನು ಸದರಿ ದಾಖಲೆಗೆ ಮಾಡಿಸಿ ನಿಪಿ-1 ರಲ್ಲಿ ನನ್ನ ತಂದೆಯ ಸಹಿಯನ್ನು ನಾನೇ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-1 ರಲ್ಲಿ ನನ್ನ ತಂದೆಯ ಸಹಿ ಮಾಡುವ ಪೂರ್ವದಲ್ಲಿಯೇ ಸಿದ್ದೇಗೌಡ ವಕೀಲರ ಸಹಿಯನ್ನು ಪಡೆದುಕೊಳ್ಳಲಾಗಿತ್ತು ಎನ್ನುವುದು ಸರಿಯಲ್ಲ. ನಿಪಿ-1 ರಂತೆ ನನ್ನ ಹೆಸರಿಗೆ ವಿಶೇಷ ಅಧಿಕಾರ ಪತ್ರವಾದಂತಹ ವಿಚಾರ ನನ್ನ ತಂದೆಗೆ ಗೊತ್ತಿಲ್ಲ ಎನ್ನುವುದು ಹಾಗೂ ಅದನ್ನು ನಾನೇ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎನ್ನುವುದು ಸರಿಯಲ್ಲ. ಈ ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ಈ ದಾವೆಯ ಕುರಿತು ನಿಮ್ಮ ವಕೀಲರಿಗೆ ನೀವೇ ಮಾಹಿತಿ ಕೊಟ್ಟಿದ್ದೀರಿ? ಎಂದರೆ ಸಾಕ್ಷಿಯು ನಿಜ, ನನ್ನ ತಂದೆಯನ್ನು ಕೇಳಿ ಮಾಹಿತಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಈ ದಾವೆಯ ಪ್ರತಿಯೊಂದು

ವಿಚಾರಣೆಯ ದಿನಾಂಕದಂದು ನಾನೇ ಹಾಜರಾಗುತ್ತಿದ್ದೇನೆ ಎನ್ನುವುದು ನಿಜ. ನಿಪಿ-1 ನ್ನು ಮಾಡುವ ಸಮಯಕ್ಕೆ ನಾನು ಮೊದಲಿಗೆ ನೋಟರಿ ಸಹಿ ಮಾಡಿರುವ ಶಶಿಕಲಾ ವಕೀಲರ ಬಳಿ ಹೋಗಿದ್ದೇನೇ? ಅಥವಾ ಶ್ರೀ ಸಿದ್ದೇಗೌಡ ವಕೀರಲ ಬಳಿ ಹೋಗಿದ್ದೇನೇ? ಎನ್ನುವುದು ನನಗೆ ನೆನಪಿಲ್ಲ.

7. ನಾನು ಇದುವರೆವಿಗೂ 1 ನೇ ಪ್ರತಿವಾದಿಯೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ. 1 ನೇ ಪ್ರತಿವಾದಿ ನನ್ನ ಜಮೀನನ್ನು ಮಾರಾಟ ಮಾಡುತ್ತಿರುವುದಾಗಿ ನಮ್ಮ ಮನೆಗೆ ಬಂದು ತಿಳಿಸಿದ್ದರು. ನಾನು ದಾವಾ ಸ್ವತ್ತನ್ನು ನೋಡಿದ್ದೇನೆ. ಅದರ ಚಕ್ಕುಬಂದಿ ಪೂರ್ವಕ್ಕೆ ರಸ್ತೆ ಹಾಗೂ ಸಿದ್ದವೀರಯ್ಯನ ಜಮೀನು, ಪಶ್ಚಿಮಕ್ಕೆ ಯಡಿಯೂರಪ್ಪ ಹಾಗೂ ದೇವರಾಜಯ್ಯನವರ ಜಮೀನು, ದಕ್ಷಿಣಕ್ಕೆ ಸಾವಂದಯ್ಯನ ಮಗ ಶಿವಣ್ಣನ ಜಮೀನು ಹಾಗೂ ಉತ್ತರಕ್ಕೆ ಶಿವಪ್ಪನ ಜಮೀನು ಇರುತ್ತದೆ. ಅಕ್ಟೋಬರ್-2015 ರ ಮೊದಲನೇ ವಾರದಲ್ಲಿ 1 ನೇ ಪ್ರತಿವಾದಿ ನಮ್ಮ ಮನೆಗೆ ಬಂದಿದ್ದು, ಮೂರನೇ ವಾರದಲ್ಲಿ ಕ್ರಯದ ಮಾತುಕತೆಯಾಗಿರುತ್ತದೆ. ಆ ಸಮಯದಲ್ಲಿ ಶಿವಕುಮಾರ್, ನರಸಪ್ಪ ಬಿನ್ ನರಸಿಂಹಯ್ಯ, 1 ನೇ ಪ್ರತಿವಾದಿ ಹಾಗೂ ಆತನ ಬಾಮೈದ ಗಿರೀಶ ಹಾಜರಿದ್ದರು. ಆ ಸಮಯದಲ್ಲಿ ನಾವು 1 ನೇ ಪ್ರತಿವಾದಿಗೆ ಮುಂಗಡ ಹಣವನ್ನು ಕೊಟ್ಟಿಲ್ಲ.

8. ನಿಪಿ-2 ದಿನಾಂಕ 31.10.2015 ರಂದು ನೋಂದಣಿಯಾಗಿರುತ್ತದೆ. ನಿಪಿ-2 ದಾಖಲೆಯಾದಾಗ 1 ನೇ ಪ್ರತಿವಾದಿ ಭದ್ರತೆಗೆಂದು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. ನಾವು ಮಾತುಕತೆಗೆಂದು ಕುಳಿತಾಗ ದಾವಾ ಸ್ವತ್ತಿನ ಪಹಣಿ, ಇ.ಸಿ., ಹಾಗೂ ಖಾತೆಯನ್ನು ಪಡೆದುಕೊಂಡಿರುತ್ತೇವೆ. ದಾವಾ ಸ್ವತ್ತು ಮೂಲತಃ 1 ನೇ ಪ್ರತಿವಾದಿಯ ತಾತನಿಗೆ ಸೇರಿದ ಸ್ವತ್ತು? ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ, ಪಹಣಿ ದಾಖಲಾಗಿತ್ತು ಎಂದು ನುಡಿಯುತ್ತಾರೆ.

ನಾನು ಅವರ ಕುಟುಂಬದ ವಂಶವೃಕ್ಷವನ್ನು ಪರಿಶೀಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಮಗೆ ಗೊತ್ತಿದ್ದ ಕಾರಣದಿಂದ ಅವರ ವಂಶವೃಕ್ಷವನ್ನು ಕೇಳಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಅವರ ವಂಶವೃಕ್ಷದ ಬಗ್ಗೆ ಗೊತ್ತಿದ್ದರೂ ಸಹ ನಿಪಿ-2 ದಾಖಲೆಗೆ 1 ನೇ ಪ್ರತಿವಾದಿಯ ತಾಯಿ ಹಾಗೂ ಅವರ ಅಕ್ಕ ತಂಗಿಯರ ಸಹಿಗಳನ್ನು ಪಡೆದುಕೊಂಡಿಲ್ಲ? ಎಂದರೆ ಸಾಕ್ಷಿಯು ಕ್ರಯಪತ್ರ ನೋಂದಣಿ ಮಾಡಿಸಿಕೊಳ್ಳುವಾಗ ಪಡೆದುಕೊಳ್ಳುತ್ತಿದ್ದೆವು ಎಂದು ನುಡಿಯುತ್ತಾರೆ.

9. ನಿಪಿ-2 ನ್ನು ತಯಾರಿಸಿದ ನಂತರದಲ್ಲಿ 6 ಲಕ್ಷ ರೂಗಳನ್ನು ಕಾವೇರಿ ಗ್ರಾಮೀಣ ಬ್ಯಾಂಕ್, ಕುಂಬಳಗೋಡು ಶಾಖೆಯ ಚೆಕ್ ಮೂಲಕ ಹಾಗೂ 4 ಲಕ್ಷ ರೂಗಳನ್ನು ನಗದಾಗಿ ನೋಂದಣಿಯ ವೇಳೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 1 ನೇ ಪ್ರತಿವಾದಿಗೆ ಪಾವತಿಸಿರುತ್ತೇನೆ. ದಿನಾಂಕ 31.10.2015 ರಂದು ಉಪನೋಂದಣಾಧಿಕಾರಿಗಳ ಕಛೇರಿಗೆ ನಮ್ಮ ತಂದೆ ಹಾಜರಾಗಿದ್ದು, ನಾನು ಹಾಜರಿರಲಿಲ್ಲ. ಆ ದಿನಕ್ಕೆ ನಾನು ಕೆಂಗೇರಿ 37 ನೇ ಡಿಪೋವಿನಲ್ಲಿ ಕೆಲಸ ಮಾಡುತ್ತಿದ್ದೆ. ದಿನಾಂಕ 31.10.2015 ರ ನಿಪಿ-2 ದಾಖಲೆಯನ್ನು ನಾನೇ ತಯಾರಿಸಿದ್ದು ಅದಕ್ಕೆ ನನ್ನ ತಂದೆಯ ಸಹಿಯನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-2 ರಲ್ಲಿ ಕಾಣಿಸಿದಂತೆ 4 ಲಕ್ಷ ರೂಗಳನ್ನು ನಗದಾಗಿ 1 ನೇ ಪ್ರತಿವಾದಿಗೆ ಕೊಟ್ಟಿಲ್ಲ ಎನ್ನುವುದು ಹಾಗೂ ನಿಪಿ-2 ರಲ್ಲಿ ಕಾಣಿಸಲಾದ 6 ಲಕ್ಷ ರೂಗಳನ್ನು ನಮ್ಮ ತಂದೆಯ ಬ್ಯಾಂಕ್ ಖಾತೆಯ ಮೂಲಕ 1 ನೇ ಪ್ರತಿವಾದಿಗೆ ಚೆಕ್ಕನ್ನು ಕೊಡಿಸಿದ್ದೇನೆ ಎನ್ನುವುದು ಸರಿಯಲ್ಲ.

10. ನಿಪಿ-2 ರಂತೆ ವ್ಯವಹಾರವಾಗುವ ಪೂರ್ವದಲ್ಲಿಯೇ ನನ್ನ ತಂದೆಗೂ ಹಾಗೂ 1 ನೇ ಪ್ರತಿವಾದಿಗೂ ನನ್ನ ಮೂಲಕ ಕ್ರಯದ ಕರಾರು ಪತ್ರದ ವ್ಯವಹಾರವಾಗಿತ್ತು ನನಗೆ ಗೊತ್ತಿಲ್ಲ. ದಿನಾಂಕ 02.06.2010 ರಂದು ನಾನು 1 ನೇ

ಪ್ರತಿವಾದಿಗೆ ಒಂದೂವರೆ ಲಕ್ಷ ರೂಗಳ ಸಾಲವನ್ನು ಕೊಟ್ಟು ಅದರ ಭದ್ರತೆಗಾಗಿ ನನ್ನ ತಂದೆಯ ಹೆಸರಿನಲ್ಲಿ ಒಂದು ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿದ್ದೆ ಎನ್ನುವುದು ಸರಿಯಲ್ಲ. ಸದರಿ ಸಾಲದ ವ್ಯವಹಾರದ ಸಂಬಂಧ 1ನೇ ಪ್ರತಿವಾದಿ ಮಾಸಿಕ ಶೇಕಡ 3ರಂತೆ ನನಗೆ ಬಡ್ಡಿ ಪಾವತಿಸುತ್ತಿದ್ದರು ಎನ್ನುವುದು ಸರಿಯಲ್ಲ. 1ನೇ ಪ್ರತಿವಾದಿಯಿಂದ ಸಾಲದ ಹಣ ಸಂಪೂರ್ಣ ಮರುಪಾವತಿಯಾದ ನಂತರದಲ್ಲಿ ನಾನೇ ನನ್ನ ತಂದೆಯ ಮೂಲಕ ದಿನಾಂಕ 28.08.2014 ರಂದು ಸದರಿ ಕ್ರಯದ ಕರಾರು ಪತ್ರವನ್ನು ರದ್ದುಪಡಿಸಿಕೊಟ್ಟಿದ್ದೇನೆ ಎನ್ನುವುದು ನನಗೆ ಗೊತ್ತಿಲ್ಲ.

11. ನಾನು ಡಿಪೋ ಮ್ಯಾನೇಜರ್ ಕೆಲಸದೊಂದಿಗೆ ನಮ್ಮ ಇಲಾಖೆಯ ಚಾಲಕರಿಗೆ, ನಿರ್ವಾಹಕರಿಗೆ, ರೈತರಿಗೆ ಬಡ್ಡಿ ರೂಪದಲ್ಲಿ ಹಣವನ್ನು ಕೊಡುವ ಹಾಗೂ ನಮ್ಮ ತಂದೆಯ ಹೆಸರಿನಲ್ಲಿ ಕ್ರಯದ ಕರಾರು ಪತ್ರಗಳನ್ನು ಮಾಡಿಸಿಕೊಳ್ಳುವ ಹಾಗೂ ಸಾಲಗಾರರಿಂದ ಖಾಲಿ ಚೆಕ್ಕುಗಳನ್ನು ಪಡೆದುಕೊಳ್ಳುವ ಬೇನಾಮಿ ವ್ಯವಹಾರಗಳನ್ನು ಮಾಡುತ್ತಿದ್ದೇನೆ ಎನ್ನುವುದು ಸರಿಯಲ್ಲ.

12. ನಿಪಿ-2 ರಲ್ಲಿ ಕಾಣಿಸಲಾದ 6 ಲಕ್ಷ ರೂಗಳನ್ನು ನಮ್ಮ ತಂದೆಯ ಚೆಕ್ಕಿನ ಮೂಲಕ 1ನೇ ಪ್ರತಿವಾದಿಗೆ ಕೊಡಿಸಿದ್ದು ಅದಕ್ಕೆ ಸಂಬಂಧಿಸಿದಂತೆ ನಿಪಿ-2 ಕರಾರು ಪತ್ರವನ್ನು ಸೃಷ್ಟಿಸಿದ್ದು ಇದೂ ಸಹ ಬೇನಾಮಿ ವ್ಯವಹಾರ ಎನ್ನುವುದು ಸರಿಯಲ್ಲ. ಈ ರೀತಿಯಾಗಿ ನಾನೇ 1ನೇ ಪ್ರತಿವಾದಿಯೊಂದಿಗೆ 6 ಲಕ್ಷ ರೂಗಳನ್ನು ಮಾಸಿಕ ಶೇಕಡ 3ರ ಬಡ್ಡಿ ದರದಂತೆ ಸಾಲದ ವ್ಯವಹಾರವನ್ನು ಮಾಡಿದ್ದು ಅದರ ಭದ್ರತೆಗಾಗಿ ನಿಪಿ-2 ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಮ್ಮ ತಂದೆಗೆ ನಿಪಿ-2 ರ ಬಗ್ಗೆಯಾಗಲೀ ಅಥವಾ ಅದರಲ್ಲಿ ಕಾಣಿಸಲಾದ ಕ್ರಯದ ವ್ಯವಹಾರದ ಬಗ್ಗೆಯಾಗಲೀ ಯಾವುದೇ

ಮಾಹಿತಿ ಇಲ್ಲ ಎನ್ನುವುದು ಹಾಗೂ ನಮ್ಮ ತಂದೆಯ ಮೂಲಕ ಈ ವ್ಯವಹಾರವನ್ನು ಮಾಡಿಸಲು ನಾನು ಪ್ರಯತ್ನಿಸಿದ್ದೇನೆ ಎನ್ನುವುದು ಸರಿಯಲ್ಲ. ನಮ್ಮ ತಂದೆ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ಹೇಳಿದ ಪಕ್ಷದಲ್ಲಿ ಸತ್ಯಾಂಶ ಹೊರಬರುತ್ತದೆಂಬ ಉದ್ದೇಶಕ್ಕಾಗಿ ನಿಪಿ-1 ರಂತೆ ದಾಖಲೆಯನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-2 ರಲ್ಲಿ ಕಾಣಿಸಲಾದ 6 ಲಕ್ಷ ರೂಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ದಾಖಲಿಸುವವರೆಗೂ 1 ನೇ ಪ್ರತಿವಾದಿ ನನಗೆ 9 ಲಕ್ಷ ರೂಗಳನ್ನು ಬಡ್ಡಿ ರೂಪದಲ್ಲಿ ಪಾವತಿಸಿದ್ದಾರೆ ಎನ್ನುವುದು ಸರಿಯಲ್ಲ. ನಾನು ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದಕ್ಕಿಂತ ಹೆಚ್ಚಾಗಿ ಬಡ್ಡಿ ವ್ಯವಹಾರಗಳನ್ನೇ ಮಾಡುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರ ಮನವಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.